

ಚಿತ್ರ: ಎ.ಎನ್. ಮುಕುಂದ

ಕೂಡ ಅಪರೂಪವೇ. ಉಪಕಾರಸ್ಮರಣೆ ಮತ್ತು ಅಪಕಾರಸ್ಮರಣೆಗಳೆರಡರಲ್ಲೂ ಅವರು ಅ-ಸಮಾನರು. ಜ್ಞಾಪಕಶಕ್ತಿ ಒಂದು ವರ. ಎಷ್ಟೋ ಸಲ ಅದು ಶಾಪ. ಅವರು ಮೈಸೂರು ವಿಶ್ವವಿದ್ಯಾಲಯ, ಮಹಾರಾಜ ಕಾಲೇಜು ತಂಡಗಳಿಗೆ ಕಬಡ್ಡಿ ಆಡಿದವರು. ಕುಸ್ತಿ ಕಲಿತವರು. ಮೈಸೂರಿನಲ್ಲಿ ನಡೆದ ಬಹುಪಾಲು ಜನಪರ ಚಳವಳಿಗಳಲ್ಲಿ ಭಾಗವಹಿಸಿ ಅವುಗಳಿಗೆ ಘನತೆ ತಂದುಕೊಟ್ಟವರು, 'ರಂಗಾಯಣ'ದಂತಹ ಸಂಘಸಂಸ್ಥೆಗಳು ಬಿಕ್ಕಟ್ಟನ್ನು ಎದುರಿಸಿದಾಗ ನ್ಯಾಯಕ್ಕಾಗಿ ಹೋರಾಡಿದವರು. ಅಧಿಕಾರ ಸ್ಥಾನಗಳಿಂದ ಸದಾ ದೂರ ಉಳಿಯುತ್ತಿದ್ದ ನಾಯಕರ ರಾಜಿ ಮಾಡಿಕೊಳ್ಳದಿರುವ ಗುಣವು ಎಲ್ಲರ ಗೌರವವನ್ನು ಪಡೆಯುತ್ತಿತ್ತು. ಗ್ರಂಥಾಲಯ ಇಲಾಖೆಯ 'ಪುಸ್ತಕ ಆಯ್ಕೆ ಸಮಿತಿ'ಯ ಅಧ್ಯಕ್ಷರಾಗಿ ನೇಮಕವಾದಾಗ ಎರಡೋ ಮೂರೋ ದಿನಗಳಲ್ಲಿ ಸಾವಿರಾರು ಪುಸ್ತಕಗಳನ್ನು ಆಯ್ಕೆ ಮಾಡಬೇಕಾಗಿ ಬಂತು. ಸರಿಯಾಗಿ ಓದಿ ಮೌಲ್ಯಮಾಪನ ಮಾಡಲು ಅವಕಾಶ ಕೊಡದಿದ್ದರೆ ಈ ಕೆಲಸವೇ ಬೇಡವೆಂದು ಆ ಕ್ಷಣವೇ ರಾಜಿನಾಮೆ ಕೊಟ್ಟವರು ನಮ್ಮ ನಾಯಕರು. ಅವರ ಅಧ್ಯಕ್ಷ ಪದವಿ ಆ ಸಭೆಗೇ ಮುಗಿದು ಹೋಯಿತು.

ಅವರು 'ಮಯೂರ' ಪತ್ರಿಕೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ 'ರಾಜಕೀಯ ಒಳಸುಳಿ'ಗಳ ಬಗ್ಗೆ ಸವಿವರವಾಗಿ ಬರೆದಾಗ, ಆಗ ಬದುಕಿದ್ದ ಈಗಲೂ ಬದುಕಿರುವ ಹತ್ತು ಹಲವು ಪಾತ್ರಧಾರಿಗಳು 'ತುಟಿಕ್ ಪಿಟಿಕ್' ಎನ್ನದೆ ಮೌನ ವಹಿಸಿದ್ದು ಅವರ ಸತ್ಯವಂತಿಕೆಗೆ